# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ

ಸಿ.ಸಿ. ನಂ.20/2022

CW-1/PW-1

| | | |
|---|---|---|
| ಹೆಸರು | ಃ- | ದಿವ್ಯ |
| ಗಂಡನ ಹೆಸರು | ಃ- | ಪಾಂಡುರಂಗ ರಾವ್ |
| ವಯಸ್ಸು | ಃ- | 36 ವರ್ಷ |
| ವೃತ್ತಿ | ಃ- | ಗೃಹಿಣಿ |
| ವಾಸ ಸ್ಥಳ | ಃ- | ಬಿಡದಿ |
| ದಿನಾಂಕ | ಃ- | 05.09.2024 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಕಲಂ 299 ಸಿ.ಆರ್.ಪಿ.ಸಿ., ಅಡಿಯಲ್ಲಿ ಸಾಕ್ಷಿಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ದಿನಾಂಕ 08.11.2021 ರಂದು ಬಿಡದಿಯ ತ್ಯಾಗರಾಜು ಶಾಲೆಯಿಂದ ಕೆಲಸ ಮುಗಿಸಿಕೊಂಡು ಮನೆಗೆ ಹೋಗಿ ಸುಧಾರಿಸಿಕೊಂಡು, ನಂತರ ಪ್ರಶ್ನೆ ಪತ್ರಿಕೆ ಪ್ರಿಂಟ್ಔಟ್ ತೆಗೆಸಿಕೊಳ್ಳಲು ಕೇತಗಾನಹಳ್ಳಿಯ ಮುಖ್ಯ ರಸ್ತೆಯಲ್ಲಿರುವ ಅಂಗಡಿಯಲ್ಲಿ ಪ್ರಿಂಟ್ ತೆಗೆಸಿಕೊಂಡು ವಾಪಸ್ ಮನೆಗೆ ಸಂಜೆ 6.00 ಗಂಟೆ ಸಮಯದಲ್ಲಿ ಬರುತ್ತಿರುವಾಗ ಮಾರುತಿ ಬಡಾವಣೆಯಲ್ಲಿರುವ ನಮ್ಮ ಮನೆಯ ಹತ್ತಿರ ಯಾರೋ ಒಬ್ಬ ವ್ಯಕ್ತಿ ನನ್ನ ಕತ್ತಿಗೆ ಕೈ ಹಾಕಿ ಚೈನು ಎಳೆದಂತಾಯಿತು. ನಾನು ಹಿಡಿದುಕೊಳ್ಳುವಷ್ಟರಲ್ಲಿ ಸರವನ್ನು ಕಿತ್ತುಕೊಂಡು ಮಾರುತಿ ಬಡಾವಣೆ ಕಡೆ ಓಡಿಹೋದನು. ನಾನು ಹಿಂದೆ ಕೂಗಿಕೊಂಡು ಹೋದೆ ಆತ ಓಡಿಹೋದನು. ಆತ ಎತ್ತರಕ್ಕೆ ದಪ್ಪಕ್ಕಿದ್ದ. ಹಳದಿ ಬಣ್ಣದ ಶರ್ಟ್, ಕಪ್ಪು ಬಣ್ಣದ ಬರ್ಮುಡ ಧರಿಸಿದ್ದನು. ನಂತರ ನಾನು ಬಿಡದಿ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟೆ. ದೂರನ್ನು ನೋಡಿದರೆ

ಗುರುತಿಸುತ್ತೇನೆ. ದೂರನ್ನು ಈಗ ನೋಡುತ್ತಿದ್ದು ಅದನ್ನು ಈಗ **ನಿಪಿ-1** ಎಂದು ಹಾಗೂ ನನ್ನ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಿರುತ್ತೇನೆ.

2. ಅದೇ ದಿನ ಪೊಲೀಸರು ರಾತ್ರಿ 8.30 ಗಂಟೆಗೆ ಮಹಜರ್ ಮಾಡಲು ಸ್ಥಳಕ್ಕೆ ಬಂದರು. ಪೊಲೀಸರಿಗೆ ನಾನು ಸ್ಥಳ ತೋರಿಸಿದೆ. ಅಲ್ಲಿ ಮಹಜರ್ ಮಾಡಿದರು. ಮಹಜರ್ ಕಾಲಕ್ಕೆ ಚಾಸಾ-2 ಮತ್ತು ಚಾಸಾ-3 ಹಾಜರಿದ್ದರು. ನಂತರದಲ್ಲಿ ದಿನಾಂಕ 12.11.2021 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ, ಆಸಾಮಿಯನ್ನು ನನಗೆ ತೋರಿಸಿದರು. ಆತನೇ ನನ್ನಿಂದ ಚೈನು ದರೋಡೆ ಮಾಡಿದ ವ್ಯಕ್ತಿಯಾಗಿದ್ದನು. ಪೊಲೀಸರು ಠಾಣೆಯಲ್ಲಿ ನನ್ನ ಚಿನ್ನದ ಸರವನ್ನು ತೋರಿಸಿದರು. ಆ ಆಸಾಮಿಯ ಹೆಸರು ಅಜಯ್ ಎಂದು, ಬೈರಮಂಗಲದವರು ಎಂದು ತಿಳಿಸಿದರು. ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಮಹಜರನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ-2** ಎಂದು ಹಾಗೂ ನನ್ನ ಸಹಿಯನ್ನು **ನಿಪಿ-2(ಎ)** ಎಂದು ಗುರುತಿಸಿರುತ್ತೇನೆ.

3. ಅದೇ ತಿಂಗಳು 29 ನೇ ತಾರೀಖು ಪೊಲೀಸ್ ಠಾಣೆಗೆ ಹೋದೆ. ಅಲ್ಲಿ ಪೊಲೀಸರು ಚೈನನ್ನು ನನಗೆ ಬಿಡುಗಡೆ ಮಾಡಿಕೊಟ್ಟರು. ಆ ಕಾಲಕ್ಕೆ ಪೊಲೀಸರು ಫೋಟೋ ತೆಗೆದು ನನ್ನ ಸಹಿ ಪಡೆದುಕೊಂಡರು. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸದರಿ ಪಂಚನಾಮೆಯನ್ನು **ನಿಪಿ-3** ಎಂದು ಹಾಗೂ ನನ್ನ ಸಹಿಯನ್ನು **ನಿಪಿ-3(ಎ)** ಎಂದು ಗುರುತಿಸಿರುತ್ತೇನೆ. ಮಹಜರ್ ಕಾಲಕ್ಕೆ ಪೊಲೀಸರು ಫೋಟೋ ತೆಗೆದರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಫೋಟೋವನ್ನು ಈಗ **ನಿಪಿ-4** ಎಂದು ಗುರುತಿಸಿರುತ್ತೇನೆ. ನಾನು ಪೊಲೀಸ್ ಠಾಣೆಯಿಂದ

ಬಿಡಿಸಿಕೊಂಡ ಚಿನ್ನದ ಸರವನ್ನು ಈ ದಿನ ನ್ಯಾಯಾಲಯಕ್ಕೆ ತಂದಿರುತ್ತೇನೆ. ನ್ಯಾಯಾಲಯದ ಆದೇಶದಂತೆ ಹಾಜರುಪಡಿಸಿ ವಾಪಸ್ ಪಡೆದಿರುತ್ತೇನೆ. ಸದರಿ ಚಿನ್ನದ ಸರದ ಫೋಟೋವನ್ನು ಈಗ **ನಿಪಿ-5** ಎಂದು ಗುರುತಿಸಿರುತ್ತೇನೆ. ನನ್ನ ಚಿನ್ನದ ಸರವನ್ನು ದರೋಡೆ ಮಾಡಿದ ಆಸಾಮಿಯನ್ನು ನೋಡಿದರೆ ಗುರುತಿಸುತ್ತೇನೆ. ಆತ ನ್ಯಾಯಾಲಯದ ಮುಂದೆ ಹಾಜರಿರುವುದಿಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.